# ಕ್ರೀಡೆ ಒಲುಮೆಯ ಹವ್ಯಾಸ

**ನೀತು**
**ಉದಯದ 'ದೇವಯಾನಿ'ಯ ಸುಜಾತ**

◆ **ಅನುಭವಿ ಹಿರಿಯ ಕಲಾವಿದರಿಗೆ ಮನ್ನಣೆ ಕಡಿಮೆ ಆಗುತ್ತೆ ಎನ್ನುವ ಮಾತಿದೆ, ನೀವು ಏನು ಹೇಳ್ತೀರಾ?**

ವೈಯಕ್ತಿಕವಾಗಿ ಅಂತಹ ಅನುಭವ ನನಗೆ ಆಗಿಲ್ಲ. ಏಕೆಂದರೆ 2003ರಿಂದ ಇಲ್ಲಿಯ ತನಕ ಪುರುಸೊತ್ತು ಇಲ್ಲದಂತೆ ಕೆಲಸ ಮಾಡುತ್ತಿದ್ದೇನೆ. ಉದಯ ಮತ್ತು ಅಂದಿನ ಈ ಟೀವಿಯಲ್ಲಿ ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಉದಯದಲ್ಲಿಯೇ 'ಕವಲುದಾರಿ' 'ವಠಾರ' 'ಕಾದಂಬರಿ' 'ಕಣಜ' ಧಾರಾವಾಹಿಗಳಲ್ಲಿ ಭಿನ್ನ ಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದೇನೆ. 'ಪಾಯಿಂಟ್ ಪರಿಮಳ'ದಂತಹ ಹಾಸ್ಯ ಕಥೆಯನ್ನೂ ನಿಭಾಯಿಸಿದ್ದೇನೆ. ಈಗಲೂ ನನಗೆ ಅವಕಾಶಗಳಿಗೆ ಕೊರತೆಯಿಲ್ಲ. ಪ್ರಧಾನ ಪಾತ್ರಗಳನ್ನೇ ಮಾಡುತ್ತಿದ್ದೇನೆ. ಯಾವತ್ತೂ ಚಿಕ್ಕಪುಟ್ಟ ಎನ್ನಬಹುದಾದ ಪಾತ್ರಗಳೂ ಬಂದಿಲ್ಲ. ಆದರೆ, ನೀವು ಹೇಳಿದಂತೆ ಒಂದೆರಡು ವರ್ಷಗಳ ಹಿಂದೆ ಅಂತಹ ಆರೋಪ ಇತ್ತು. ಬರೀ ಹೊಸಬರನ್ನೇ ಇಷ್ಟಪಡುತ್ತಾರೆ. ನವಯುವಕ– ಯುವತಿಯರಿದ್ದರೆ ಜನ ನೋಡುತ್ತಾರೆ. ಹಳಬರಾದರೆ ಅಷ್ಟು ಇಷ್ಟ ಆಗುವುದಿಲ್ಲ ಎಂದು ಪರಿಭಾವಿಸಲಾಗಿತ್ತು. ಆದರೆ ಅದು ಕೆಲವೇ ದಿನಗಳಲ್ಲಿ ಬದಲಾಗಿ ಹಳೆಯ ಕಲಾವಿದರಿಗೆ ಮನ್ನಣೆ ಸಿಗ್ತಾ ಇದೆ ಎಂದು ನಾನು ಅಂದುಕೊಂಡಿದ್ದೇನೆ.



◆ **ನೀವು ಕಲಾವಿದರಾದ ಕ್ಷಣವನ್ನು ನೆನಪಿಸಿ..**

ತೀರಾ ಆಕಸ್ಮಿಕವಾಗಿ ನಾನು ಬಣ್ಣ ಹಚ್ಚಿದೆ. ನನಗಾಗ 16 ವರ್ಷ. ದೂರದರ್ಶನದಿಂದ 'ಮನನ' ಎಂಬ ಟೆಲಿಫಿಲ್ಮ್ ಮಾಡಿದ್ದರು. ಆಗ ಒಬ್ಬ ನಟಿ ಕೈ ಕೊಟ್ಟಳು. ಆಗ ಅವಕಾಶವೊಂದು ನನ್ನ ಹುಡುಕಿಕೊಂಡು ಬಂತು. ಶಾಲೆಗಳಲ್ಲಿ ಹಲವಾರು ನಾಟಕಗಳಲ್ಲಿ ನಟಿಸಿದ್ದ ನನಗೆ ಸಣ್ಣ ಭರವಸೆ ಇದ್ದಿದ್ದರಿಂದ ಆಯ್ತು ಮಾಡ್ತೇನೆ ಎಂದು ಒಪ್ಪಿದೆ. ಹತ್ತಾರು ದಿನ ಅಷ್ಟೇ ಅಲ್ವಾ ಎನ್ನುವ ವಿಶ್ವಾಸ ಕೂಡ ಧೈರ್ಯ ತುಂಬಿತ್ತು. ಆ ಒಂದು ಅವಕಾಶ ನನ್ನನ್ನು ಪೂರ್ಣಪ್ರಮಾಣದ ಕಲಾವಿದೆಯನ್ನಾಗಿ ಮಾಡಿತು.

◆ **ದೇವಯಾನಿಯ ಸುಜಾತ**

ಇದು ಸಂಪೂರ್ಣ ನೆಗೆಟಿವ್ ಪಾತ್ರ. ನನ್ನ ಅಣ್ಣನ ಮಗನಿಗೆ ನನ್ನ ಮಗಳನ್ನು ಕೊಡಬೇಕು ಎನ್ನುವುದು ನನ್ನಾಸೆ. ಆದರೆ ಕಥಾನಾಯಕ ಪ್ರೇಮಿಸಿ ಮದುವೆಯಾಗಿದ್ದಾನೆ. ಆ ಸಂಬಂಧ ಹಾಳು ಮಾಡಬೇಕು ಎನ್ನುವುದೇ ನನ್ನ ಪರಮ ಉದ್ದೇಶ. ಈಗಷ್ಟೇ ಧಾರಾವಾಹಿ ಆರಂಭ ಆಗಿದೆ. ಇನ್ನೂ ಎಪ್ಪತ್ತು ಕಂತುಗಳು ಬಂದಿವೆ. ಸದ್ಯ ಇದರ ಬಗ್ಗೆ ಸದಾಭಿಪ್ರಾಯ ವ್ಯಕ್ತವಾಗುತ್ತಿದೆ. ಅದಕ್ಕೂ ಹೆಚ್ಚಿನದಾಗಿ ಸನ್‌ನೆಟ್ ವರ್ಕ್‌ನಲ್ಲಿ ಮೊದಲ ಕನ್ನಡ ಧಾರಾವಾಹಿಯೊಂದು ತಮಿಳಿಗೆ ಡಬ್ ಮಾಡಲಾಗುತ್ತಿದೆ. ಅದನ್ನು ಫೆಬ್ರುವರಿಯಲ್ಲಿಯೇ ಪ್ರಸಾರ ಮಾಡಲಾಗುತ್ತಿದೆ. ಧಾರಾವಾಹಿ ಅದ್ದೂರಿಯಾಗಿದೆ ಎನ್ನುವುದು ಹೆಚ್ಚುಗಾರಿಕೆಯೇ ಸರಿ.

◆ **ನಟನೆಯನ್ನು ಬಿಟ್ಟು ಬೇರೆ ಇನ್ನೇನು ಮಾಡುತ್ತೀರಿ?**

ನನಗೆ ಕ್ರೀಡೆ ಎಂದರೆ ಕಿವಿ ನಿಮಿರುತ್ತವೆ. ಶಟಲ್ ಆಡುತ್ತೇನೆ. ಕಲಾವಿದರ ಕ್ರೀಡಾ ಸ್ಪರ್ಧೆಯಲ್ಲಿಯೂ ಭಾಗವಹಿಸುತ್ತೇನೆ. ಬಹುತೇಕ ಸ್ಪರ್ಧೆಗಳಲ್ಲಿ ಗೆದ್ದಿದ್ದೇನೆ. ಅದನ್ನು ಬಿಟ್ಟರೆ ನನ್ನ ಖುಷಿಗಾಗಿ ಯೋಗವನ್ನು ಕಲಿಸುತ್ತೇನೆ. ಉದಯ ಟೀವಿಯ 'ಸೂಪರ್ ಕಬಡಿ' ರಿಯಾಲಿಟಿ ಶೋನಲ್ಲಿ ಕೂಡ ಭಾಗವಹಿಸಿದ್ದೆ. ಒಟ್ಟಾರೆ ಆಟೋಟ ಎಂದರೆ ಆಸಕ್ತಿ ಹೆಚ್ಚಿದೆ.

◆ **ಸಾಮಾಜಿಕ ಜೀವನದಲ್ಲಿ ಅಭಿಮಾನ ಪ್ರಕಟಿಸಿದ್ದು ಕಿರಿ ಕಿರಿ ಅನ್ನಿಸಿದೆಯಾ?**

ಮೆಚ್ಚುಗೆ ಯಾರಿಗೆ ತಾನೆ ಇಷ್ಟ ಆಗಲ್ಲ. ಸಾಮಾನ್ಯವಾಗಿ ಖುಷಿ ಪಟ್ಟಿದ್ದೇನೆ ಹೊರತು ಬೇಜಾರ ಆಗಿಲ್ಲ. ಐಡೆಂಟಿಟಿ ಸುಮಾರಷ್ಟು ಅನುಕೂಲತೆಗಳನ್ನೇ ಉಂಟುಮಾಡಿದೆ. ಉದಾಹರಣೆ ಶಾಪಿಂಗ್ ಹೋದಾಗ ಯಾರಾದರೂ ನಮ್ಮನ್ನು ಗುರುತಿಸಿದಾಗ ಹೆಚ್ಚಿನ ನಿಗಾ ವಹಿಸಿ ನೋಡಿಕೊಳ್ಳುತ್ತಾರೆ. ಡಿಸ್ಕೌಂಟ್ ಕೂಡ ಮಾಡ್ತಾರೆ. ಹೀಗೆಲ್ಲಾ ಅನುಭವ ನನಗೆ ಆಗಿದೆ. ಅದರಿಂದ ಲಾಭವೇ ಹೆಚ್ಚಾಗುತ್ತದೆಯೇ ಹೊರತು ಕಿರಿಕಿರಿ ಅಂತ ನನಗಂತೂ ಅನ್ನಿಸಿಲ್ಲ.

◆ **ತೆರೆಯಲ್ಲಿ ಮೊದಲ ಹೆಜ್ಜೆ ಇಡಬಯಸುವರಿಗೆ ನಿಮ್ಮ ಸಲಹೆ?**

ಅಭಿನಯದಿಂದಲೇ ಬದುಕನ್ನು ಕಟ್ಟಿಕೊಳ್ಳುತ್ತೇನೆ ಎನ್ನುವುದು ಕಷ್ಟ ಆಗಬಹುದು. ಅದರಲ್ಲೂ ಪುರುಷರು ಹೆಚ್ಚು ಯೋಚನೆ ಮಾಡಬೇಕು. ಇತ್ತೀಚೆಗೆ ವೃತ್ತಿ ಶಿಕ್ಷಣ ಪಡೆದ ಅನೇಕರು ಬರುತ್ತಿದ್ದಾರೆ. ಅವರಿಗೆ ಗ್ಲಾಮರ್ ಲುಕ್ ಆಕರ್ಷಣೆ ಇರಬಹುದು. ಅದರಿಂದ ಅವರ ವೃತ್ತಿಗೆ ತೊಂದರೆ ಆಗುತ್ತದೆ. ಒಬ್ಬ ವೈದ್ಯ ಬಣ್ಣ ಹಚ್ಚಿದರೆ ಸಮಾಜದಲ್ಲಿ ಒಬ್ಬ ವೈದ್ಯರ ಕೊರತೆ ಉಂಟಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಧಾರಾವಾಹಿಯಲ್ಲಿ ಪೂರ್ಣಾವಧಿಯ ಕೆಲಸ ಸಿಗಲಾರದು ತಿಂಗಳಲ್ಲಿ ಹತ್ತಾರು ದಿನ ಕೆಲಸ ಮಾಡಿದ ನಂತರ ಉಳಿದ ದಿನಗಳು ಏನು ಮಾಡಬೇಕು ಎನ್ನುವ ಪ್ರಶ್ನೆ ಕಾಡುತ್ತದೆ. ಆದಾಯ ಕೂಡ ಅನಿಶ್ಚಿತ. ನಟನೆಯ ಜೊತೆ ಮತ್ತೊಂದು ಬೇರೆ ಕೆಲಸ ಇಟ್ಟುಕೊಂಡರೆ ಒಳಿತು. ಇದು ನನ್ನ ವೈಯಕ್ತಿಕ ಅಭಿಪ್ರಾಯವೇ ವಿನಃ ಬೇರೆಯವರ ಮೇಲೆ ಹೇರುತ್ತಿಲ್ಲ.

■ **ರಾಘವೇಂದ್ರ ಕೆ.**